# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **850(823)**
**ಸದಸ್ಯರ ಹೆಸರು** : **ಶ್ರೀ ಕೆ ವಿವೇಕಾನಂದ**
**(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ** : **24.08.2026.**
**ಉತ್ತರಿಸುವ ಸಚಿವರು** : **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು.**

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಾಲಾ ಶಿಕ್ಷಣ ಇಲಾಖೆಯ ಪ್ರೌಢಶಾಲಾ ಶಿಕ್ಷಕರು, ದೈಹಿಕ ಶಿಕ್ಷಕರು, ಮುಖ್ಯ ಶಿಕ್ಷಕರು ಹಾಗೂ ಉಪನ್ಯಾಸಕರು-ಪ್ರಾಂಶುಪಾಲರುಗಳಿಗೆ ಸಕಾಲಕ್ಕೆ ಸರ್ಕಾರ ನಿಯಮಾವಳಿಯ ರೀತ್ಯಾ ಅವಧಿಯೊಳಗೆ ಬಡ್ತಿಯನ್ನು ನೀಡಲಾಗುತ್ತಿದೆಯೇ;</td><td>ಪ್ರೌಢಶಾಲೆ:-<br>ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಹುದ್ದೆಗೆ ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯಿಂದ ಗ್ರೂಪ್-ಬಿ ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗೆ ಮುಂಬಡ್ತಿ ಕೋಟಾದಡಿಯಲ್ಲಿ ಲಭ್ಯವಾಗುವ ಖಾಲಿ ಹುದ್ದೆಗಳಿಗೆ ನಿಯಮಾನುಸಾರ ಅರ್ಹತೆಯಂತೆ ಕಾಲ-ಕಾಲಕ್ಕೆ ಬಡ್ತಿಯನ್ನು ನೀಡಲಾಗುತ್ತಿದೆ.<br><br>ಪದವಿ ಪೂರ್ವ ಕಾಲೇಜು:-<br>ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ವೃಂದದಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಹುದ್ದೆಗೆ ಮತ್ತು ಉಪನ್ಯಾಸಕರ ಹುದ್ದೆಯಿಂದ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ಕೋಟಾದಡಿಯಲ್ಲಿ ಲಭ್ಯವಾಗುವ ಹುದ್ದೆಗಳಿಗೆ ನಿಯಮಾನುಸಾರ ಅರ್ಹತೆಯಂತೆ ಕಾಲ-ಕಾಲಕ್ಕೆ ಬಡ್ತಿಯನ್ನು ನೀಡಲಾಗುತ್ತಿದೆ.</td></tr>
<tr><td>ಆ)</td><td>ಶಿಕ್ಷಣ ಇಲಾಖೆಯು ಈ ನೌಕರರಿಗೆ ಯಾವ ಯಾವ ಹುದ್ದೆಗಳಿಗೆ ನಿಗಧಿತ ಅವಧಿಯೊಳಗೆ ಮುಂಬಡ್ತಿ ನೀಡಲಾಗಿದೆ: (ಪೂರ್ಣ ವಿವರವಾದ ಮಾಹಿತಿ ನೀಡುವುದು)</td><td>ಪ್ರೌಢಶಾಲೆ:-<br>1. ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ಉಪಪ್ರಾಂಶುಪಾಲರು ಹುದ್ದೆಗೆ ಮುಂಬಡ್ತಿ ನೀಡಿರುವ ವಿವರ ಅನುಬಂಧ-1ರಲ್ಲಿ ಒದಗಿಸಿದೆ.<br>2. ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-01 ಹುದ್ದೆಯಿಂದ ಗ್ರೂಪ್-ಬಿ ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡಿರುವ ವಿವರ:-<br><table><tr><th>ಕ್ರ.ಸಂ</th><th>ವರ್ಷ</th><th>ಹುದ್ದೆಗಳು</th></tr><tr><td>1.</td><td>2021-22</td><td>226</td></tr><tr><td>2.</td><td>2023-24</td><td>50</td></tr></table></td></tr>
</table>

| 2025-26 | | |
|---|---|---|
| 1. | ಬೆಂಗಳೂರು | 47 |
| 2. | ಮೈಸೂರು | 36 |
| 3. | ಕಲಬುರ್ಗಿ | 16 ಹುದ್ದೆಗಳಿಗೆ ಬಡ್ತಿ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ |
| 4. | ಧಾರವಾಡ | 32 ಹುದ್ದೆಗಳಿಗೆ ಬಡ್ತಿ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. |

2021 ರಿಂದ 2024ನೇ ಸಾಲಿನ ವರೆಗೆ ರಾಜ್ಯ ವ್ಯಾಪ್ತಿಯಲ್ಲಿ ಬಡ್ತಿಯಲ್ಲಿ ಲಭ್ಯವಾಗುವ ಖಾಲಿ ಹುದ್ದೆಗಳಿಗೆ ಅರ್ಹ ಶಿಕ್ಷಕರನ್ನು ಪರಿಗಣಿಸಿ ನಿಯಾಮಾನುಸಾರ ಬಡ್ತಿ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 04 ಡಿಪಿಐ 2019 ದಿನಾಂಕ:04.09.2023 ರಲ್ಲಿ ಆಯಾ ವಿಭಾಗಿಯ ಆಯುಕ್ತರು ಗ್ರೂಪ್-ಬಿ ವೃಂದಕ್ಕೆ ನೇಮಕಾತಿ ಪ್ರಾಧಿಕಾರಿಗಳೆಂದು ಆದೇಶಿಸಲಾಗಿದೆ. ಅದರನ್ವಯ 2025ನೇ ಸಾಲಿನಲ್ಲಿ ವಿಭಾಗವಾರು ಲಭ್ಯವಾಗುವ ಖಾಲಿ ಹುದ್ದೆಗಳಿಗೆ ಅರ್ಹ ಶಿಕ್ಷಕರನ್ನು ಪರಿಗಣಿಸಿ ನಿಯಾಮಾನುಸಾರ ಬಡ್ತಿ ನೀಡಲಾಗುತ್ತಿದೆ.

**3.** ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದಿಂದ ಗ್ರೂಪ್ ಎ ಕಿರಿಯ ಶ್ರೇಣಿ ಶಿಕ್ಷಣಾಧೀಕಾರಿಗಳು/ತತ್ಸಮಾನ ವೃಂದಕ್ಕೆ ಬಡ್ತಿಯಲ್ಲಿ ಲಭ್ಯವಾಗುವ ಖಾಲಿ ಹುದ್ದೆಗಳಿಗೆ ನಿಯಮಾನುಸಾರ ಅರ್ಹತೆಯಂತೆ ಕಾಲ-ಕಾಲಕ್ಕೆ ಅರ್ಹ ಅಧಿಕಾರಿಗಳ ಬಡ್ತಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅದರಂತೆ ಸರ್ಕಾರದ ಹಂತದಲ್ಲಿ ನಿಯಮಾನುಸಾರ ಬಡ್ತಿ ನೀಡಲಾಗಿರುತ್ತದೆ.

**ಪದವಿ ಪೂರ್ವ ಕಾಲೇಜು:-**

ಸಹಶಿಕ್ಷಕ ವೃಂದದಿಂದ ಉಪನ್ಯಾಸಕ ವೃಂದಕ್ಕೆ ಬಡ್ತಿ ನೀಡುವ ಸಂಬಂಧ ಶಾಲಾ ಶಿಕ್ಷಣ ಇಲಾಖೆಯವರು ತಮ್ಮ ಅಧೀನದಲ್ಲಿನ ಕೇಂದ್ರೀಕೃತ ದಾಖಲಾತಿ ಘಟಕದ ಮೂಲಕ ದಿನಾಂಕ:- 25.05.2026 ರಿಂದ 30.05.2026 ರವರೆಗೆ ಅರ್ಹತಾ ಪರೀಕ್ಷೆಯನ್ನು ನಡಿಸಿ, ಅರ್ಹತಾ ಪರೀಕ್ಷೆಯಲ್ಲಿ ಶೇಕಡ 50 ಹಾಗೂ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಅರ್ಹತೆ ಪಡೆದು ಉತ್ತೀರ್ಣಗೊಂಡಿರುವ ಶಿಕ್ಷಕರ ವಿಷಯವಾರು (ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಸಂಸ್ಕೃತ, ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ,

| | | |
|---|---|---|
| | | ಗಣಿತ ಮತ್ತು ಜೀವಶಾಸ್ತ್ರ) ಅರ್ಹತಾ ಪಟ್ಟಿಯನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇವರಿಗೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಕಛೇರಿಯಿಂದ ದಿನಾಂಕ:28-07-2026ರಂದು ಸಲ್ಲಿಸಿರುತ್ತಾರೆ.<br><br>ಅರ್ಹತಾ ಪಟ್ಟಿಯನುಸಾರ ಮುಂಬಡ್ತಿ ಕೋಟಾದ 1015 ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ರಾಜ್ಯದ ಎಲ್ಲಾ ಜಿಲ್ಲೆಯ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಂದ ದಾಸ್ತುವೇಜುಗಳನ್ನು ಸ್ವೀಕರಿಸಿದ ನಂತರ ಇಲಾಖಾ ಮುಂಬಡ್ತಿ ಸಭೆಯನ್ನು ನಡೆಸಿ ಬಡ್ತಿ ಆದೇಶಗಳನ್ನು ಹೊರಡಿಸಲು ಕ್ರಮವಹಿಸಲಾಗುವುದು.<br><br>ದಿನಾಂಕ:12-03-2024ರಂದು ಒಟ್ಟು 287 ಉಪನ್ಯಾಸಕರಿಗೆ ಪ್ರಾಂಶುಪಾಲರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಲಾಗಿದೆ. |
| ಇ) | ಶಾಲಾ ಶಿಕ್ಷಣ ಇಲಾಖೆ ನೌಕರರಿಗೆ ಬಡ್ತಿ ನೀಡಲು ಸರ್ಕಾರ ನಿಗಧಿಪಡಿಸಿರುವ ನಿಯಮಾವಳಿಗಳ ಪ್ರಕಾರ ಎಷ್ಟು ತಿಂಗಳಿಗೊಮ್ಮ ಮುಂಬಡ್ತಿಯನ್ನು ನೀಡಬೇಕಿದೆ; | ರಾಜ್ಯ ಸಿವಿಲ್ ಸೇವೆಗಳಲ್ಲಿ ವಿವಿಧ ಹುದ್ದೆಗಳಿಗೆ ಜೇಷ್ಠತೆ ಮತ್ತು ಅರ್ಹತೆ (Seniority-cum-merit) ಆಧಾರದ ಮೇಲೆ ಮುಂಬಡ್ತಿ ನೀಡುವಾಗ ಮುಂಬಡ್ತಿ ಸಮಿತಿಗಳು ಅನುಸರಿಸಬೇಕಾದ ನಿರ್ದಿಷ್ಟ ಕಾರ್ಯವಿಧಾನಗಳ ಕುರಿತು ಸರ್ಕಾರವು ಹೊರಡಿಸಿರುವ ಮತ್ತು ಸುತ್ತೋಲೆ ಆದೇಶಗಳನ್ವಯ ಮುಂಬಡ್ತಿ ಕೋಟಾದಡಿಯಲ್ಲಿ ಲಭ್ಯವಾಗುವ ಖಾಲಿ ಹುದ್ದೆಗಳಿಗೆ ಕಾಲ-ಕಾಲಕ್ಕೆ ಜೇಷ್ಠತೆ ಮತ್ತು ಅರ್ಹತೆಯನುಸಾರ ಮುಂಬಡ್ತಿ ನೀಡಲಾಗುತ್ತಿದೆ. |
| (ಈ) | ಈ ಮೇಲಿನ ಎಲ್ಲಾ ವರ್ಗದ ನೌಕರರಿಗೆ ಹಲವಾರು ಕಾರಣಗಳಿಂದ ಸರ್ಕಾರ ಮುಂಬಡ್ತಿ ನೀಡದೇ ನಿವೃತ್ತಿ ಹೊಂದಿದ ನೌಕರರ ಸಂಖ್ಯೆ ಎಷ್ಟು? (ಕಳೆದ 3 ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು) | |

**ಇಪಿ 96 ಎಲ್‌ಬಿಪಿ 2026**

**(ಎಸ್ ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಇಲಾಖಾ ಸಚಿವರು**

## ಅನುಬಂಧ-1

| ಕ್ರಸಂ | ವಿಭಾಗ | ವರ್ಷವಾರು | ಮುಂಬಡ್ತಿ ಹುದ್ದೆ |
|---|---|---|---|
| **01** | ಬೆಂಗಳೂರು | **2020** | 232 |
| | ಮೈಸೂರು | | 348 |
| | ಕಲಬುರ್ಗಿ | | 261 |
| | ಧಾರವಾಡ | | 185 |
| | ಒಟ್ಟು | | **1026** |
| **02** | ಬೆಂಗಳೂರು | **2021** | 55 |
| | ಮೈಸೂರು | | 68 |
| | ಕಲಬುರ್ಗಿ | | 0 |
| | ಧಾರವಾಡ | | 0 |
| | ಒಟ್ಟು | | **123** |
| **03** | ಬೆಂಗಳೂರು | **2022** | 199 |
| | ಮೈಸೂರು | | 125 |
| | ಕಲಬುರ್ಗಿ | | 0 |
| | ಧಾರವಾಡ | | 131 |
| | ಒಟ್ಟು | | **455** |
| **04** | ಬೆಂಗಳೂರು | **2023** | 151 |
| | ಮೈಸೂರು | | 164 |
| | ಕಲಬುರ್ಗಿ | | 70 |
| | ಧಾರವಾಡ | | 126 |
| | **ಒಟ್ಟು** | | **511** |
| **05** | ಬೆಂಗಳೂರು | **2024** | 96 |
| | ಮೈಸೂರು | | 79 |
| | ಕಲಬುರ್ಗಿ | | 0 |
| | ಧಾರವಾಡ | | 156 |
| | **ಒಟ್ಟು** | | **331** |
| **06** | ಬೆಂಗಳೂರು | **2025** | 89 |
| | ಮೈಸೂರು | | 82 |
| | ಕಲಬುರ್ಗಿ | | 139 |
| | ಧಾರವಾಡ | | 98 |
| | **ಒಟ್ಟು** | | **408** |